(ಇಂದು ದಿನಾಂಕಃ 07-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ್.ಎನ.ಬಿ ವಕೀಲರಿಂದ ಃ**

1. ನಾನು ದ್ವಿತಿಯ ಪಿ.ಯುಸಿವರೆಗೆ ವಿದ್ಯಾಬಾಸ ಮಾಡಿರುತ್ತೇನೆ. ಹುಸೇನಪ್ಪರವರ ಹೆಂಡತಿಯಾದ ಬಾಲಮ್ಮರವರಿಗೆ 6 ಜನ ಮಕ್ಕಳು ಅದರ ಪೈಕಿ 5 ಜನ ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಇರುತ್ತಾಳೆ. ಬಾಲಮ್ಮರವರ 6 ಜನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಎಷ್ಟು ಜನ ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿದೆ. ಈ ದಾವೆಯಲ್ಲಿ ಬಾಲಮ್ಮರವರ 5 ಜನ ಗಂಡು ಮಕ್ಕಳ ಹೆಸರು ಮತ್ತು ಅವರ ಗಂಡನ ಹೆಸರು ಬರೆಸಿರುತ್ತೇನೆ, ಈಗ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿ ಸುರೇಶ ಇರುತ್ತಾರೆ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಸುರೇಶರವರು ಬಾಲಮ್ಮರವರ ಮಗ ಇರುತ್ತಾರೆ. ಬಾಲಮ್ಮರವರ ಹೆಣ್ಣು ಮಗಳ ಹೆಸರು ಮಾಣ್ಯಮ್ಮ ಇರುತ್ತದೆ. ಮಾಣ್ಯಮ್ಮರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ.

2. ನಮ್ಮ ಕುಟುಂಬಕ್ಕೆ ಒಟ್ಟು 3 ಆಸ್ತಿಗಳುಇರುತ್ತವೆ. ಅದರ ಸರ್ವೆ ನಂಬರ 20, ಸರ್ವೆ ನಂಬರ 9 ಮತ್ತು ಸರ್ವೆ ನಂಬರ 53 ಇರುತ್ತದೆ. ಸರ್ವೆ ನಂಬರ 9 ನ್ನು ನಾವು ಖರೀದಿ ಮಾಡಿರುತ್ತೇವೆ. ಸರ್ವೆ ನಂಬರ 9 ನ್ನು ನಾವು ಖರೀದಿ ಮಾಡಿದ ಸಮಯದಲ್ಲಿ ನನಗೆ 8-9 ವರ್ಷ ವಯಸ್ಸಾಗಿತ್ತು. ಸದರಿ ಜಮೀನಿನ ಖರಿದಿ ವ್ಯವಹಾರವನ್ನು ನನ್ನ ತಂದೆ ಒಬ್ಬರೆ ಮಾಡಿರುತ್ತಾರೆ ಎಂದರೆ ಸರಿ. 2004 ರಲ್ಲಿ ನಮ್ಮ ಮನೆಯ ಎಲ್ಲಾ ವ್ಯವಹಾರವನ್ನು ನನ್ನ ತಂದೆ ಮಾಡುತ್ತಿದ್ದರು ನಮಗೆ ಏನು ಗೊತ್ತಿರಲಿಲ್ಲ ಎಂದರೆ ಸರಿ. ಬಾಲಮ್ಮರವರು ಮತ್ತು ನಮ್ಮ ತಂದೆಯ ನಡುವೆ ಏನುವ್ಯವಹಾರ ವಾಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ತಂದೆ ಬಾಲಮ್ಮರಿಗೆ ಎಷ್ಟು ಜಮೀನನ್ನು ಮಾರಾಟ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ತಾಯಿಗೆ ವ್ಯವಹಾರದ ಬಗ್ಗೆ ಎಲ್ಲಾ ಗೊತ್ತಿದೆ ಎಂದರೆ ಸಾಕ್ಷಿ ನನ್ನ ತಾಯಿಗೆ ಏನು ಗೊತ್ತಿಲ್ಲ ಎಂದು ಹೇಳುತ್ತಾರೆ. ನಮ್ಮ ತಾಯಿ ಊರಿನಲ್ಲಿ ಇದ್ದಾರೆ ಎಂದರೆ ಸಾಕ್ಷಿ ಅವರಿಗೆ ಆರಾಮ ಇಲ್ಲ ಎಂದು ಹೇಳುತ್ತಾರೆ. ಅವರಿಗೆ ಆರಾಮ ಇಲ್ಲ ಎಂದು ತೋರಿಸಲು ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ.

ನನ್ನ ತಾಯಿಗೆ ಯಾವುದೇ ಅನಾರೋಗ್ಯ ಇರುವುದಿಲ್ಲ, ಅವರಿಗೆ ಎಲ್ಲಾ ವಿಷಯಗಳು ತಿಳಿದಿರುತ್ತವೆ ಅವರು ನ್ಯಾಯಾಲಯಕ್ಕೆ ಬಂದರೆ ಎಲ್ಲಾ ವಿಷಯಗಳು ಗೊತ್ತಾಗುತ್ತದೆ ಎಂದು ಅದನ್ನು ಮುಚ್ಚಿಡಲು ನನ್ನ ತಾಯಿಗೆ ಆರಾಮ ಇಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಬಾಲಮ್ಮರವರ ಹೆಸರಿಗೆ 2004 ರಿಂದ ಇರುವುದನ್ನು ನಾನು ಅಥವಾ ನನ್ನ ತಂದೆ ಇಲ್ಲಿಯವರೆಗೆ ಪ್ರಶ್ನಿಸಿರುವುದಿಲ್ಲ, ಸಾಕ್ಷಿ ಮುಂದುವರೆದು ನಮಗೆ ಅದರ ಬಗ್ಗೆ ಏನು ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿ ಬಿಟ್ಟು ಬೇರೆ ಆಸ್ತಿಯಲ್ಲಿ ನಾವು ಬೆಳೆ ಸಾಲ ಪಡೆದಿರುತ್ತೇನೆ. ಸಾಲ ತೆಗೆದುಕೊಂಡು ಸುಮಾರು 10 ವರ್ಷ ಆಗಿರುತ್ತದೆ ಎಂದು ಹೇಳುತ್ತಾರೆ. ಜಮೀನಿನಲ್ಲಿ ಯಾರು ಪಟ್ಟೆದಾರರು ಇರುತ್ತಾರೆ, ಯಾರು ಕಬ್ಜೆದಾರರು ಮತ್ತು ವ್ಯವಸಾಯ ಮಾಡುತ್ತಾರೊ ಅವರ ಹೆಸರು ಪಹಣಿಯಲ್ಲಿ ಬರುತ್ತದೆ ಎಂದರೆ ಸರಿ. 2004 ರಿಂದ ಪಹಣಿಯಲ್ಲಿ ಪಟ್ಟೆದಾರ ಮತ್ತು ಸ್ವಾಧೀನದಾರರು ಬಾಲಮ್ಮ ಇರುತ್ತಾರೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ನಾನು ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದೇನೆ ಎಂದು ತೋರೀಸಲು ದಾಖಲೆಯನ್ನು ಸಲ್ಲಿಸಿರುತ್ತೇನೆ. ಸರಕಾರದವರು ಯಾರು ಪಟ್ಟೆದಾರರು ಇರುತ್ತಾರೆ ಮತ್ತು ಯಾರು ಸಾಗುವಳಿ ಮಾಡುತ್ತಾರೆ ಅವರ ಹೆಸರು ಪಹಣಿಯಲ್ಲಿ ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಮೇಲೆ ಸರಕಾರ ಸೌಲಭ್ಯವನ್ನು ಇಲ್ಲಿಯವರೆಗೆ ಬಾಲಮ್ಮರವರು ಪಡೆದುಕೊಳ್ಳುತ್ತಿದ್ದರೆ ಎಂದರೆ ಸರಿ. ಸಾಕ್ಷಿ ಅವರು ಏನು ತೆಗೆದುಕೊಳ್ಳುತ್ತಿದ್ದರು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಮೇಲೆ ಸರಕಾರ ಸೌಲಭ್ಯವನ್ನು ಇಲ್ಲಿಯವರೆಗೆ ಬಾಲಮ್ಮರವರು ಪಡೆದುಕೊಳ್ಳುತ್ತಿದ್ದರೆ ಅದು ತಪ್ಪು ಇದೆ ಎಂದು ನಾನು ಯಾವುದೇ ಅರ್ಜಿಕೊಟ್ಟು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ಅವರು ಏನು ತೆಗೆದುಕೊಳ್ಳುತ್ತಿದ್ದರು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನಗೆ ಮಾರ್ಚ ತಿಂಗಳಿನಲ್ಲಿ 2021 ರಲ್ಲಿ ಗೊತ್ತಾಯಿತು. ನನಗೆ ಗೊತ್ತಾದ ನಂತರ ನಾನು ತಹಸಿಲ್ದಾರ ಕಛೇರಿಯಲ್ಲಿ ಅರ್ಜಿ ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ನಾನು 2021 ರವರೆಗೆ ಪಹಣಿ ನೋಡಿರಲಿಲ್ಲ ಎಂದು ಹೇಳುತ್ತಾರೆ. ಅದನ್ನು ನಾನೇ ನೋಡಿರುತ್ತೇನೆ. ಪಹಣಿ ನನ್ನ ತಾಯಿ ನೋಡಿಲ್ಲ. ಈ ದಾವೆಯ ಬಗ್ಗೆ ನನ್ನ ತಾಯಿಗೆ ಏನುಗೊತ್ತಿರುವುದಿಲ್ಲ, ನಾನೇ ಅವರಿಗೆ ಹೇಳಿದ್ದೇನೆ. ಈ ದಾವೆಯನ್ನು ನಮ್ಮ ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ. ಈ ದಾವೆಯಲ್ಲಿ ಏನು ಬರೆದಿರುತ್ತಾರೆ ಎಂದು ನನ್ನ ತಾಯಿಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಗೊತ್ತಿರ ಬಹುದು ಎಂದು ಹೇಳುತ್ತಾರೆ. ಸುಮಾರು 18 ವರ್ಷದಿಂದ ಬಾಲಮ್ಮ ಮತ್ತು ಅವರ ಮಕ್ಕಳು ದಾವಾ ಆಸ್ತಿಯಲ್ಲಿ

ಬಿತ್ತುವುದು ಬೆಳೆಯುವುದು ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನಾವು ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಪ್ರತಿ ವರ್ಷ ಎಲ್ಲಾ ರೈತರಿಗೆ ಸರಕಾರದಿಂದ ಪರಿಹಾರ ಬರುತ್ತದೆ ಎಂದರೆ ಸರಿ. ನಮ್ಮ ಜಮೀನಿಗು ಕೂಡ ಪರಿಹಾರ ಹಣ ಬರುತ್ತದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.